ವರದಿಗಳನ್ನೊಪ್ಪಿಸುವುದು

ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಐದನೆಯ ವರದಿಯನ್ನೊಪ್ಪಿಸುತ್ತೇನೆ.

ಶ್ರೀ ಕೆ. ಜಿ. ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ ಸದನವು ಈ ವರದಿಯನ್ನು ಒಪ್ಪುತ್ತದೆಂದು ಸೂಚಿಸುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ (ಅಧ್ಯಕ್ಷರು, ಅಂದಾಜು ಸಮಿತಿ).—ಮಾನ್ಯ ಅಧ್ಯಕ್ಷರೇ ಅಂದಾಜುಗಳ ಸಮಿತಿಯ ಈ ಕೆಳಕಂಡ ವರದಿಗಳನ್ನೊಪ್ಪಿಸುತ್ತೇನೆ.

ಅ) ಆರನೆಯ ವಿಧಾನ ಸಭೆಯ ಸಮಿತಿಯವರು ವೀನಸುಗಾರಿಕೆ ಹಾಗೂ ತೋಟಗಾರಿಕೆ ಇಲಾಖೆಯ ಮೇಲೆ ಸಲ್ಲಿಸಿದ್ದ ಐದನೆಯ ವರದಿಯಲ್ಲಿನ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮದ ಬಗ್ಗೆ ಎಂಟನೆಯ ವಿಧಾನ ಸಭೆಯ ಅಂದಾಜು ಸಮಿತಿಯವರು ಸಲ್ಲಿಸುತ್ತಿರುವ ಐದನೆಯ ಮತ್ತು ಆರನೇ ವರದಿ, ಹಾಗೂ

ಆ) ಏಳನೆಯ ವಿಧಾನ ಸಭೆಯ ಅಂದಾಜು ಸಮಿತಿಯವರು ಘಟಪ್ರಭಾ ಮತ್ತು ಮಲಪ್ರಭಾ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಮೊದಲನೆಯ ವರದಿಯ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಏಳನೆಯ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

೧೦-೦೦ ಎ. ಎಂ.

ಪ್ರಕಟಣೆ

ಅಧ್ಯಕ್ಷರು.—ಭಾರತ ದಂಡಪ್ರಕ್ರಿಯೆ ಸಂಹಿತೆಯ ೧೪೫, ೩೪೦ ೧೮೬ನೇ ಕಲಮುಗಳ ಮೇರೆಗೆ ವಿಧಾನ ಸಭಾ ಸದಸ್ಯರಾದ ಶ್ರೀ ಪಂಪಾಪತಿಯವರನ್ನು ದಾವಣಗೆರೆಯಲ್ಲಿ ದಿನಾಂಕ ೨೮-೧-೧೯೮೮ ರಂದು ಬೆಳಿಗ್ಗೆ ೧೧-೩೦ ಗಂಟೆಗೆ ಬಂಧಿಸಲಾಯಿತು. ಮಾನ್ಯ ಸದಸ್ಯರು ಜಾಮೀನಿನ ಮೇಲೆ ಬಿಡುಗಡೆ ಹೊಂದಲು ನಿರಾಕರಿಸಿದ್ದರಿಂದ ಅವರನ್ನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುವುದೆಂದೂ ಹಾಗೂ ಆ ಬಗ್ಗೆ ಪ್ರಗತಿಯನ್ನು ತಿಳಿಸಲಾಗುವುದೆಂದು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ದಾವಣಗೆರೆ ಅವರಿಂದ ಸಂದೇಶ ಬಂದಿದೆ.

ಗಮನ ಸೆಳೆಯುವ ಸೂಚನೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಜಿಲ್ಲಾ ಘಟ್ಟದ ಶಿಕ್ಷಕರ ನೇಮಕಾತಿ ಸಮಿತಿಗಳು ಕೆಲಸ ಮಾಡದೇ ಇರುವುದರಿಂದ ಟಿ.ಸಿ.ಹೆಚ್. ತರಬೇತಿ ಪಡೆದ ನಿರುದ್ಯೋಗಿಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣದ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು.—ಅವರ ಪರವಾಗಿ ಯಾರಾದರೂ ಉತ್ತರಿಸುತ್ತೀರಾ ?

ಪ್ರೊ ಎ. ಲಕ್ಷ್ಮೀಸಾಗರ್.—ಇನ್ನೊಂದು ದಿನ ತೆಗೆದುಕೊಳ್ಳಿ. ಈಗ ಮಂತ್ರಿಗಳು ಇಲ್ಲ.

ಅಧ್ಯಕ್ಷರು.—ಆಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದರೆ ಏನು ? ಏತಕ್ಕೆ ನಾವು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಬೇಕು ?

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಳಿ ಹೋಗಿದ್ದಾರೆಯೇ ? ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆಯೆ ?

(ಗೊಂದಲ)

ಅಧ್ಯಕ್ಷರು.—ಇಬ್ಬರು ಮೂವರು ಒಟ್ಟಿಗೆ ಮಾತನಾಡಿದರೆ ಹೇಗೆ ? ಯಾರ ಮಾತನ್ನು ರೆಕಾರ್ಡ್ ಮಾಡಬೇಕು ಹೇಳಿ. ನಿಮ್ಮ ಲೀಡರ್ ಕೃಷ್ಣನ್‌ರವರು ನಿಂತಾಗ ನೀವೆಲ್ಲರೂ ಕುಳಿತುಕೊಳ್ಳುವುದಕ್ಕೆ ಕಲಿಯಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಗವರ್ನರ ಸೆಳೆಯುವ ಸೂಚನೆಯನ್ನು ಹಾಕಿ ಮಾನ್ಯ ಮಂತ್ರಿಗಳು ಎಲ್ಲಿ ಎಂದು ಕೇಳಿದರೆ ರಘುಪತಿಯವರು ಕೈ ಎಲ್ಲುಡಿಸಿದರು.

ಶ್ರೀ ಎಂ. ರಘುಪತಿ.—ಮಾನ್ಯ ಮಂತ್ರಿಗಳು ಬಂದರು ನೋಡಿ.

ಶ್ರೀ ಎಂ. ಎಸ್. ಕೃಷ್ಣನ್.—ಬಂದರೆ ಸಂತೋಷ.

ಶ್ರೀ ಬಿ. ಸೋಮಶೇಖರ್.—ಆಮೇಲೆ ಉತ್ತರಿಸುತ್ತೇನೆ.

ಅಧ್ಯಕ್ಷರು.—ನಿಮಗೆ ಟೈಮಿಂಗೆ ಸರಿಯಾಗಿ ಬರುವುದಕ್ಕೆ ಆಗುವುದಿಲ್ಲವ ? ೯ ಗಂಟೆಗೆ ಬೆಲ್ ಹಾಕಿದರೆ ೧೦ ಗಂಟೆಗೆ ಬರುತ್ತೀರಿ. ಮೇಲ್ಮನೆಗೆ ಹೋಗಿದ್ದರೆ ಅಡ್ಡಿಯಿಲ್ಲ ಚೀಫ್ ವಿಪ್ ಅವರು ಹೇಳಬೇಕು. ಅವರೂ ಬಂದಿಲ್ಲ. ನಿಮಗೆ ೯ಕ್ಕೆ ಬರುವುದಕ್ಕೆ ಏನು ಕಷ್ಟ ? ಇವತ್ತು ೧೦ ನಿಮಿಷ ಗಂಟೆ ಹೊಡೆದಿದೆ. ಅದು ಸರಿಯಲ್ಲ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ ಮೈಸೂರು ನಗರದಲ್ಲಿನ ಸರ್ಕಾರಿ ಮುದ್ರಣಾಲಯದಲ್ಲಿ ಕಳೆದ ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರನ್ನು ಖಾಯಂ ಮಾಡಿರುವ ವಿಚಾರದ ಬಗ್ಗೆ ಉನ್ನತ ಶಿಕ್ಷಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಪ್ರೊ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳು ಬಂದಿಲ್ಲ. ಇನ್ನೊಂದು ಸಾರಿ ತೆಗೆದುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲಾ ಮಂತ್ರಿಗಳು ಇವತ್ತು ೯ ಗಂಟೆಗೆ ಸಭೆ ಇದೆ ಎನ್ನುವುದನ್ನು ಮರೆತು ನಿದ್ದೆ ಮಾಡಿದ್ದಾರೆಂದು ಕಾಣುತ್ತದೆ. ಮಾನ್ಯ ಬೊಮ್ಮಾಯಿಯವರು ತಡವಾಗಿ ಬಂದರು. ಮಾನ್ಯ ಸೋಮಶೇಖರ್‌ರವರು ಈಗ ಬಂದರು.

ಪ್ರೊ ಎ. ಲಕ್ಷ್ಮೀಸಾಗರ್.—ಅದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ನಾಳೆ ತೆಗೆದುಕೊಳ್ಳಿ. ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಸರಿಯಾದ ಉತ್ತರ ಬಂದಿರಲಿಲ್ಲ. ಅಪೂರ್ಣ ಉತ್ತರ ಕೊಡಬೇಕಾಗುತ್ತದೆಂದು ಕೊಡಲಿಲ್ಲ.

ಅಧ್ಯಕ್ಷರು.—ಸರಿಯಾದ ಉತ್ತರ ಬರಲಿಲ್ಲವೆಂದರೆ ಯಾವ ಅಧಿಕಾರಿಗಳು ಅಂಥ ಉತ್ತರವನ್ನು ಕಳುಹಿಸಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅವರನ್ನು ನೀವು ಕಂಟ್ರೋಲ್ ಮಾಡಬೇಕು.

ಶ್ರೀ ಬಿ. ಸೋಮಶೇಖರ್.—ವಿವರವಾಗಿ ಉತ್ತರ ಕೊಡಬೇಕಾಗಿತ್ತು. ಅದಕ್ಕೋಸ್ಕರ ....

ಶ್ರೀ ಯಂ. ಭೂಪತಿ.—ಕೊನೆಗೂ ಇವರು ಉತ್ತರ ಕೊಡುವುದಿಲ್ಲ. ಎಲ್ಲಾ ಸೂಚನೆಗಳು ಲ್ಯಾಪ್ಸ್ ಆಗುತ್ತವೆ.

ಅಧ್ಯಕ್ಷರು.—ಉತ್ತರ ಕೊಡಿಸುತ್ತೇನೆ ತಾವು ಕುಳಿತುಕೊಳ್ಳಿ.

ಅಧ್ಯಕ್ಷರು.—ಈಗ ನಿಯಮ ೩೭೪ರ ಕೆಳಗೆ ಚರ್ಚೆ.

ಈ ಕೆಳಕಂಡ ಮಾನ್ಯ ಸದಸ್ಯರುಗಳು ಸಭೆಯಲ್ಲಿ ಹಾಜರಿಲ್ಲ

ಶ್ರೀಯುತರುಗಳಾದ.—

ಜಿ. ರಾಮದಾಸ್
ಬಿ. ನಾರಾಯಣಸ್ವಾಮಿ
ವಿನಯಕುಮಾರ್ ಸೊರಕೆ
ಮಹಮದ್ ಲೈಕುದ್ದೀನ್
ಜಿ. ಎಸ್. ಆಚಾರ್
ಎಸ್. ಜಿ. ನಂಜಯ್ಯನ ಮಠ್
ಎಂ. ಶಿವಣ್ಣ,
ಮಾಲಿಕಯ್ಯ ವಿ. ಗುತ್ತೇದಾರ್
ಕೆ. ಜೆ. ರಾಮಸ್ವಾಮಿ
ಶರಣಬಸಪ್ಪ ಗಾಲಿ ಪಾಟೀಲ
ಕೆ. ಬಿ. ಕೋಳೀವಾಡ
ಬಿ. ಆರ್. ನೀಲಕಂಠಪ್ಪ

ನಿಯಮ ೩೭೪ರ ಮೇರೆಗೆ

ರೈತರಿಗೆ ಬೆಳೆ ವಿಮೆಯನ್ನು ವಿಮಾ ಕಂಪನಿಯವರು ಕೊಡದಿರುವ ಬಗ್ಗೆ.

ಶ್ರೀ ಎಸ್. ನಂಜಪ್ಪ.—ಅಧ್ಯಕ್ಷರೇ, ಮೈಸೂರು **ಜಿಲ್ಲೆಯ** ಕೃಷ್ಣರಾಜನಗರದ **ತಾಲ್ಲೂಕಿನ** ಮುಖ್ಯ ಬೆಳೆಯಾದ ಭತ್ತ ಮತ್ತು ರಾಗಿ ಫಸಲಿಗೆ ಬೆಳೆ ವಿಮೆ **ಜಾರಿಯಲ್ಲಿದ್ದು** ಸಾವಿರಾರು ಜನ **ರೈತರ,** ಭತ್ತದ **ಬೆಳೆಗೆ** ಬೆಂಕಿ ರೋಗ ತಗಲಿದ್ದುದರಿಂದಲೂ ಅತಿವೃಷ್ಟಿಯಿಂದಲೂ **ಕೋಟ್ಯಾಂತರ** ರೂಪಾಯಿಗಳ **ಭತ್ತ ಬೆಳೆ** ನಾಶವಾಗಿದ್ದರೂ, **ಬೆಳೆ** ವಿಮೆ ಮಾಡಿಸಿದ ರೈತನಿಗೆ ವಿಮೆ ಹಣ ಹೊಂದಲು **ತಾಲ್ಲೂಕಿನ** ಒಟ್ಟು ಬೆಳೆಯಲ್ಲಿ ನಾಲ್ಕನೇ ಒಂದಂಕ್ಕಿಂತ ಕಮ್ಮಿ ಬೆಳೆಯಾಗಿರಬೇಕೆಂದು ಅನ್ಯಾಯದ ನಿಯಮದ **ಕಾರಣ ರೈತರಿಗೆ ಬೆಳೆ** ವಿಮೆಯನ್ನು ವಿಮಾ ಕಂಪನಿಯವರು ಕೊಡುತ್ತಿಲ್ಲ. ಈ ಬಗ್ಗೆ ಕೃಷಿ ಖಾತಾ ಸಚಿವರು ಗಮನ ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಇವತ್ತು **ಕಾನೂನು** ಆ ರೀತಿ ಇರುವುದರಿಂದ **ತೊಂದರೆ** ಆಗುತ್ತಾ ಇದೆ. ತಾಲ್ಲೂಕನ್ನು ಒಂದು ಘಟಕ ಎಂದು ಮಾಡಿರುವುದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಈ ನಿಯಮದಲ್ಲಿ ಬದಲಾವಣೆ ಮಾಡುವ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಈ ನಿಯಮವನ್ನು ಹೋಬಳಿ ಅಥವಾ ಗುಂಡಲ ಘಟಕದ ಮಟ್ಟದಲ್ಲಿ ತಂದರೆ ಒಳ್ಳೆಯದೆಂದು ನಾವು ಹೇಳಿದ್ದೇವೆ.

(ಶ್ರೀ ಗೋಪಾಲ ಮುಕುಂದ ಕಾನಡೆಯವರು ಗೈರುಹಾಜರಿ)